† ಶ್ರೀ ಕೆ. ಲಕ್ಕಪ್ಪ.—ಈ ರಸ್ತೆಯ ಪರಿಸ್ಥಿತಿ ನನಗೆ ಸಂಪೂರ್ಣವಾಗಿ ಮನವರಿಕೆಯಾಗಿದೆ. ನಾನು ಜಿಲ್ಲಾಬೋರ್ಡ್ ಅಧ್ಯಕ್ಷನಾಗಿದ್ದಾಗ ಪ್ರಾರಂಭ ಮಾಡಿದಂತಹ ಕಾರ್ಯ ಇದು. ಇದುವರೆಗೂ ಆಗದೆ ನಿಧಾನವಾಗುತ್ತಾ ಇದೆ. ಇದರ ಅವಶ್ಯಕತೆ ಬಹಳ ಜರೂರಾಗಿ ಇದೆ ಅನ್ನುವುದನ್ನು ಮನಗಂಡೇ ಇದನ್ನು ಬಜೆಟ್‌ನಲ್ಲೂ ಸಹ ಸೇರಿಸಿಕೊಂಡು ಈ ವರ್ಷ ಸುಮಾರು 35 ಸಾವಿರ ರೂಪಾಯಿಗಳನ್ನು ಖರ್ಚು ಮಾಡಬೇಕೆಂಬ ವ್ಯವಸ್ಥೆ ಮಾಡಿದೆ.

Starting of Evening Classes in Government Colleges

390. Sri P. VENKATAGIRIYAPPA (Kolar).—

Will the Minister for Education be pleased to state :—

(*a*) whether it has come to the notice of Government that in places where there is a single Government College, there is a great demand by the N. G. O's. and others to start evening classes ;

(*b*) whether Government intend to start evening classes in such places with a view to benefit the poorer section of the youngsters who could not afford to continue their studies in Colleges after passing S. S. L. C. but now desire to pursue their studies while working ?

Sri N. M. KOTRABASAIAH SOGI (Deputy Minister for Education).—

(*a*) Such a demand has come only from One Place, Kolar.

(b) Government have no such intention at present.

ಶ್ರೀ ಪಿ. ವೆಂಕಟಗಿರಿಯಪ್ಪ.—ನನ್ನ ಪ್ರಶ್ನೆಗೆ ಉತ್ತರ ಕೊಡುತ್ತಾ ಸಂಜೆ ಕಾಲೇಜನು ಮಾಡುವ ಉದ್ದೇಶ ಸರ್ಕಾರಕ್ಕೆ ಇಲ್ಲ ಎಂದು ಹೇಳಿದ್ದೀರಿ. ಈಗ ಬೆಂಗಳೂರು ಮತ್ತು ಇತರ ಕಡೆಗಳಲ್ಲೂ ಕೂಡ ಸಂಜೆ ಕಾಲೇಜು ಇದ್ದು ಎಸ್. ಎಸ್. ಎಲ್. ಸಿ. ಪಾಸ್ ಆಗಿ ಕಾರಕೂನರಾಗಿ ಕೆಲಸಮಾಡುತ್ತಾ ಇರುವವರು ಮತ್ತು ಉತ್ಸಾಹಶಾಲಿಗಳಿಗೆ ಓದುವುದಕ್ಕೆ ಅವಕಾಶವಾಗಿದೆ. ಅದೇ ರೀತಿಯಲ್ಲಿ ಕೋಲಾರದಲ್ಲಿ ಎಸ್. ಎಸ್. ಎಲ್. ಸಿ. ಪಾಸ್ ಆಗಿ ಕೆಲಸವಿಲ್ಲದಿರತಕ್ಕವರಿಗೂ ಕೂಡ ಇಂತಹ ಓದು ಅವಕಾಶವನ್ನು ಮಾಡಿಕೊಡುವುದಕ್ಕೆ ಏನಾದರೂ ತೊಂದರೆ ಇದೆಯೇ ಅಥವಾ ಮಾಡಿಕೊಡುವುದಕ್ಕೆ ಪ್ರಯತ್ನ ಮಾಡುತ್ತೀರಾ ?

† ಶ್ರೀ ಎಸ್. ಎಂ. ಕೊಟ್ರಬಸಯ್ಯ ಸೋಗಿ.—ಸರ್ಕಾರಿ ಕಾಲೇಜು ಇರುವ ಕಡೆ ಎಲ್ಲಾ ಸಂಜೆ ಕಾಲೇಜು ನಡೆಸುತ್ತಾ ಇಲ್ಲ. ಸಂಜೆ ಕಾಲೇಜು ಶಾಶ್ವತವಾಗಿ ನಡೆಸುವುದು ಕಷ್ಟಕರ ಅನ್ನುವುದು ಅನುಭವಕ್ಕೆ ಬಂದಿದೆ. ಮತ್ತು ಅಂತಹ ಅವಶ್ಯಕತೆಯೂ ಸಹ ಕಂಡುಬರುತ್ತಾ ಇಲ್ಲ. ಕೋಲಾರದಲ್ಲಿ ಆ ರೀತಿ ಸಂಜೆ ಕಾಲೇಜು ನಡೆಸಿದರೆ ಸಾಕಾದಷ್ಟು ಜನ ಅಭ್ಯರ್ಥಿಗಳು ಬರುತ್ತಾರೆ ಎಂಬ ಭರವಸೆ ಇಲ್ಲ. ತುಮಕೂರಿನಲ್ಲಿ ಸಿದ್ದಗಂಗಾ ಕಾಲೇಜಿನವರು ಸಂಜೆ ಕಾಲೇಜನ್ನು ನಡೆಸಿ ಸಾಕಷ್ಟು ಜನ ಅಭ್ಯರ್ಥಿಗಳು ಬರದೆ ಬಹಳ ಕಷ್ಟದ ಪರಿಸ್ಥಿತಿಯಲ್ಲಿರುವುದು ನಮ್ಮ ಅನುಭವಕ್ಕೆ ಬಂದಿದೆ. ಮತ್ತು ಸರ್ಕಾರಿ ಕಾಲೇಜು ಇರತಕ್ಕ ಎಲ್ಲಾ ಕಡೆಯಲ್ಲೂ ಸಂಜೆ ಕಾಲೇಜನ್ನು ಮಾಡುವುದು ನಮ್ಮ ನೀತಿಯೂ ಕೂಡ ಅಲ್ಲ.